"ಕನ್ನಡ ಕಾಯಕ ವರ್ಷ 2020-21"

# ತುಮಕೂರು ವಿಶ್ವವಿದ್ಯಾನಿಲಯ

ಪರೀಕ್ಷಾ ಭವನ, ಬಿ.ಎಚ್.ರಸ್ತೆ, ತುಮಕೂರು-572 103, ☎ : 0816-2255650, 2273-511 ಫ್ಯಾಕ್ಸ್ : 0816- 2270719

ದಿನಾಂಕ: 01.02.2021

ಸಂಖ್ಯೆ:ತುವಿ: ಪ.ವಿ: 2020-21 :- 614

## : ಅಧಿಸೂಚನೆ :

**ವಿಷಯ**: ವಿಶ್ವವಿದ್ಯಾನಿಲಯದ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ಇಲಾಖಾ ಪರೀಕ್ಷೆಗಳನ್ನು ನಡೆಸುವ ಕುರಿತು.

**ಉಲ್ಲೇಖ**: ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:01.02.2021

*****

ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ಖಾಯಂ ಬೋಧಕೇತರ ಸಿಬ್ಬಂದಿಗಳಿಗೆ ದ್ವಿತೀಯ ಇಲಾಖಾ ಪರೀಕ್ಷೆಗಳನ್ನು ಫೆಬ್ರವರಿ/ಮಾರ್ಚ್ -2021 ರ ಮಾಹೆಗಳಲ್ಲಿ ನಡೆಸಲಾಗುವುದು.

ಪರೀಕ್ಷೆ ತೆಗೆದುಕೊಳ್ಳಬಯಸುವ ನೌಕರರು ನಿಗದಿತ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪಡೆದು,ಅರ್ಜಿಯನ್ನು ಭರ್ತಿ ಮಾಡಿ ತಮ್ಮ ವಿಭಾಗದ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಕುಲಸಚಿವರು (ಮೌಲ್ಯಮಾಪನ) ತುಮಕೂರು ವಿಶ್ವವಿದ್ಯಾನಿಲಯ ತುಮಕೂರು. ಇವರಿಗೆ ದಿನಾಂಕ:15.02.2021 ರ ಒಳಗಾಗಿ ಕಳುಹಿಸಿಕೊಡಲು ಸೂಚಿಸಲಾಗಿದೆ. ಇಲಾಖಾ ಪರೀಕ್ಷೆ ಕಡ್ಡಾಯವಾಗಿರುವ ನೌಕರರಿಗೆ ವಿಶ್ವವಿದ್ಯಾನಿಯವು ಇಲಾಖಾ ಪರೀಕ್ಷೆಗಳನ್ನು ನಡೆಸುತ್ತಿರುವುದರಿಂದ ಮತ್ತೊಮ್ಮೆ ಪರೀಕ್ಷಾ ಶುಲ್ಕ ಪಾವತಿಯಿಂದ ವಿನಾಯಿತಿ ನೀಡಲಾಗಿದೆ.

ವಿವಿಧ ಶ್ರೇಣಿಯ ಇಲಾಖಾ ಪರೀಕ್ಷೆಗಳನ್ನು ನಡೆಸುವ ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ಪರೀಕ್ಷೆಯ ಹೆಸರು | ಪತ್ರಿಕೆ | ಗರಿಷ್ಠ ಅಂಕಗಳು |
|---|---|---|---|
| 1 | ಪ್ರಾಥಮಿಕ ದರ್ಜೆಯ ಇಲಾಖಾ ಪರೀಕ್ಷೆ | ಪತ್ರಿಕೆ- 1 | 100 |
| | | ಪತ್ರಿಕೆ- 2 | 100 |
| 2 | ಮುಂಗಡ ದರ್ಜೆಯ ಇಲಾಖಾ ಪರೀಕ್ಷೆ | ಪತ್ರಿಕೆ- 1 | 100 |
| | | ಪತ್ರಿಕೆ-2 | 100 |
| 3 | ಉನ್ನತ ದರ್ಜೆಯ ಇಲಾಖಾ ಪರೀಕ್ಷೆ | ಪತ್ರಿಕೆ- 1 | 100 |
| | | ಪತ್ರಿಕೆ- 2 | 100 |
| | | ಪತ್ರಿಕೆ- 3 | 100 |
| 4 | ವಿಶೇಷ ದರ್ಜೆಯ ಇಲಾಖಾ ಪರೀಕ್ಷೆ | ಪತ್ರಿಕೆ- 1 | 100 |
| | | ಪತ್ರಿಕೆ- 2 | 100 |
| | | ಪತ್ರಿಕೆ- 3 | 100 |
| | | ಪತ್ರಿಕೆ- 4 | 100 |

ತುಮಕೂರು ವಿಶ್ವವಿದ್ಯಾನಿಲಯದ ಅಂತರ್ಜಾಲ www.tumkuruniversity.ac.in ರಲ್ಲಿ ಇಲಾಖಾ ಪರೀಕ್ಷೆಯ ಅರ್ಜಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು, ನಿಗಧಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಪಟ್ಟ

ಪು.ತಿ.ನೋ..

ವಿಭಾಗದ ಮೇಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಕುಲಸಚಿವರು (ಮೌಲ್ಯಮಾಪನ) ಇವರಿಗೆ ದಿನಾಂಕ: 15.02.2021 ರೊಳಗೆ ಸಲ್ಲಿಸತಕ್ಕದ್ದು.

ವಿವಿಧ ಇಲಾಖಾ ಪರೀಕ್ಷೆಗಳ ಪಠ್ಯಕ್ರಮ ವಿವರಗಳನ್ನು ಅನುಬಂಧ-01 ರಲ್ಲಿ ಒದಗಿಸಲಾಗಿದೆ.

**ಸೂಚನೆ:**

1. ಅಭ್ಯರ್ಥಿಗಳು ಕನ್ನಡ ಅಥವಾ ಇಂಗ್ಲೀಷ್ ಭಾಷೆಯಲ್ಲಿ ಉತ್ತರಿಸಬಹುದಾಗಿದೆ.
2. ಇಲಾಖಾ ಪರೀಕ್ಷೆಗಳನ್ನು ತೆಗೆದುಕೊಳ್ಳುವ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ ಮತ್ತು ದಿನಭತ್ಯೆಗಳನ್ನು ನೀಡುವುದಿಲ್ಲ.
3. ಯಾವುದೇ ಸಮಯದಲ್ಲಿ ಅಂತಿಮ ದಿನಾಂಕದ ನಂತರ ಸಲ್ಲಿಸಿದ ಯಾವುದೇ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.
4. ನಿಗದಿತ ಅರ್ಜಿ ನಮೂನೆಯನ್ನು ಪೂರ್ಣವಾಗಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು,ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.
5. ಪರಿನಿಯಮದನ್ವಯ ನೌಕರರಿಗೆ ಕಡ್ಡಾಯವಾಗಿರುವ ವಿವಿಧ ಶ್ರೇಣಿಯ ಇಲಾಖಾ ಪರೀಕ್ಷೆಗಳನ್ನು ಬರೆಯಬಚ್ಛಿಸುವ ನೌಕರರು ವಿವಿಧ ಶ್ರೇಣಿಯ ಇಲಾಖಾ ಪರೀಕ್ಷೆಗೆ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸುವುದು.
6. ತುಮಕೂರು ವಿಶ್ವವಿದ್ಯಾನಿಲಯ ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆ ಪರಿನಿಯಮಾವಳಿಯನ್ವಯ-2014 ರ ಪ್ರಕರಣ 6 ರ 4(ಎ) ರನ್ವಯ ಮುಂಗಡ ದರ್ಜೆಯ ಇಲಾಖಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಾಥಮಿಕ ದರ್ಜೆಯ ಉತ್ತೀರ್ಣತೆಯಿಂದ ವಿನಾಯಿತಿ ಇರುತ್ತದೆ.
7. ವೇಳಾಪಟ್ಟಿ ಮತ್ತು ಪರೀಕ್ಷಾ ಕೇಂದ್ರದ ವಿವರಗಳನ್ನು ಮುಂದೆ ಪ್ರಕಟಿಸಲಾಗುವುದು.

ಕುಲಸಚಿವರು (ಮೌಲ್ಯಮಾಪನ)

**ಪ್ರತಿಗಳು:**

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಕಾರ್ಯಪಾಲಕ ಅಭಿಯಂತರರು, ತುಮಕೂರು ವಿಶ್ವವಿದ್ಯಾನಿಲಯ,
3. ಮುಖ್ಯಸ್ಥರು,ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ,
4. ನಿರ್ದೇಶಕರು,ಆಂತರಿಕ ಗುಣಮಟ್ಟ ಖಾತರಿ ಕೋಶ,ತುಮಕೂರು ವಿಶ್ವವಿದ್ಯಾನಿಲಯ,
5. ನಿರ್ದೇಶಕರು,ಕಾಲೇಜು ಅಭಿವೃದ್ಧಿ ಪರಿಷತ್ತು,ತುಮಕೂರು ವಿಶ್ವವಿದ್ಯಾನಿಲಯ,
6. ನಿರ್ದೇಶಕರು,ಸಂಶೋಧನೆ, ತುಮಕೂರು ವಿಶ್ವವಿದ್ಯಾನಿಲಯ,
7. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಕಲಾ ಕಾಲೇಜು, ತುಮಕೂರು.
8. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು.
9. ಎಲ್ಲಾ ವಿಭಾಗಗಳ ಉಪಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ,

(1–9: ಎಲ್ಲಾ ಅರ್ಹ ಖಾಯಂ ಬೋಧಕೇತರ ಸಿಬ್ಬಂದಿಗಳ ಗಮನಕ್ಕೆ ತರುವುದು.)

10. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು:
    ನಿಗಧಿತ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ಅಂತರ್ಜಾಲದಲ್ಲಿ ಪ್ರಕಟಿಸುವುದು.
11. ಮಾನ್ಯ ಕುಲಪತಿಯವರ ಆಪ್ತ ಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
12. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು..
13. ಕಛೇರಿ ಪ್ರತಿ.

ಅನುಬಂಧ–01

# ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

## ಬೋಧಕೇತರ ಸಿಬ್ಬಂದಿಗಳ ಇಲಾಖಾ ಪರೀಕ್ಷೆ ಪಠ್ಯಕ್ರಮಗಳ ವಿವರ

| | |
|---|---|
| 1. **Elementary Grade Departmental Examination (SDA and Typists)** | **ಪತ್ರಿಕೆ–01**<br>Essay<br>Precise Writing<br>Drafting<br>Translation Kannada to English<br>Translation English to Kannada |
| | **ಪತ್ರಿಕೆ–02 (with Text book)**<br>KCSR<br>Office Manual<br>KSU Act -2000<br>Statutes<br>(General Recruitment & CAS,)<br>Regulations (CBCS – PG/UG) |
| 2. **Advance Grade Departmental Examination (SDA, Typists, FDA, Stenographers)** | **ಪತ್ರಿಕೆ–01(with Text book)**<br>KCSR<br>KCS-CCA-1957,<br>KCS-Conduct Rule 1966, KCS Seniority<br>KFC-1958<br>Manual of Contingent Expenditure<br>and KSU Act 2000 |
| | **ಪತ್ರಿಕೆ–02(without Text book)**<br>**(objective and descriptive )**<br>UGC Act & amendment from time to time<br>Transparency Act 1999/2000<br>Translation Kannada to English,<br>English to Kannada of higher level<br>RTI Act 2005 |
| 3. **Higher Grade Departmental Examination (SDA, Typists, FDA, Stenographers)** | **ಪತ್ರಿಕೆ–01(with Text book)**<br>UGC Act with amendment from time to time<br>UGC Regulations with amendment from time to time<br>Education Act 1983 with amendment from time to time<br>KSU Act with amendment from time to time |
| | **ಪತ್ರಿಕೆ–02(with Text book)**<br>KPTT Act 1999<br>Transparency Rules 2000<br>RTI Act 2005<br>Constitution of India<br>SAKALA Act<br>NCTE Act and AICTE |
| | **ಪತ್ರಿಕೆ–03(without Text book)**<br>**(objective and descriptive )**<br>Drafting Statutes<br>Drafting Regulations<br>Drafting Agreements<br>Drafting MOU (English & Kannada) |

| | |
|---|---|
| 4. **Special Departmental Examination (Superintendent)** | ಪತ್ರಿಕೆ–01(with Text book)<br>KCSR,<br>KFC-1958<br>Manual of Contingent Expenditure<br>and KSU Act with amendment from time to time.<br>Office Procedure |
| | ಪತ್ರಿಕೆ–02 (with Text book)<br>Constitution of India<br>UGC Act with amendment from time to time<br>UGC Regulations with amendment from time to time<br>Education Act 1983 with amendment from time to time<br>NCTE Act, AITC Act |
| | ಪತ್ರಿಕೆ–03<br>Drafting policies, Circulars, Official Memorandum, Orders, agreements, General clauses Act 1882, Tumkur University litigation rules-2014, Legal Drafting, Drafting of proposals to funding agencies (both in Kannada and English language) |
| | ಪತ್ರಿಕೆ–04<br>Solving of practical cases, writing of reports, drawing of minutes of the meeting, recent developments in Higher Education System, Suggestion of Institutional reforms and Governances. |

ಕುಲಸಚಿವರು (ಮೌಲ್ಯಮಾಪನ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

# ತುಮಕೂರು ವಿಶ್ವವಿದ್ಯಾನಿಲಯ

| ರಿ.ನಂ. |
|---|

_______________ ತಿಂಗಳಲ್ಲಿ ನಡೆಯಲಿರುವ ವಿಶ್ವವಿದ್ಯಾನಿಲಯದ ಇಲಾಖೆ ಪರೀಕ್ಷೆಗಳಿಗೆ ಅಭ್ಯರ್ಥನ ಪತ್ರ.

| | | |
|---|---|---|
| 1 | ನೌಕರನ ಪೂರ್ತಿ ಹೆಸರು (ಸ್ಫುಟವಾಗಿ) | |
| 2 | ಹುದ್ದೆ | |
| 3 | ಕರ್ತವ್ಯ ನಿರ್ವಹಿಸುತ್ತಿರುವ ವಿಭಾಗ | |
| 4 | ಪರೀಕ್ಷೆಯಲ್ಲಿ ಉತ್ತರಿಸಬಯಸುವ ಮಾಧ್ಯಮ (ಇಂಗ್ಲೀಷ್ ಅಥವಾ ಕನ್ನಡ) (ಮಾಧ್ಯಮವನ್ನು ತಿಳಿಸದಿದ್ದರೆ ಅಭ್ಯರ್ಥಿಗಳು ಇಂಗ್ಲೀಷ್‌ನಲ್ಲಿ ಮಾತ್ರವೇ ಉತ್ತರಿಸಬೇಕಾಗುತ್ತದೆ) | |
| 5 | ತೆಗೆದುಕೊಳ್ಳಲು ಇಚ್ಛಿಸಿರುವ ಅರ್ಹತಾ ಪರೀಕ್ಷೆ & ಪತ್ರಿಕೆಗಳು (ಕಾಲಂಗಳಲ್ಲಿ ಹೌದು ಅಥವಾ ಇಲ್ಲ ಎಂದು ಮಾತ್ರ ನಮೂದಿಸುವುದು) | ಗ್ರೇಡ್: |
| 6 | ಪರೀಕ್ಷಾ ಶುಲ್ಕಗಳೇನಾದರೂ ಇದ್ದಲ್ಲಿ ವಿಶ್ವವಿದ್ಯಾನಿಲಯದ ನಿಧಿಗೆ ಪಾವತಿ ಮಾಡಿದ ಪರೀಕ್ಷಾ ಶುಲ್ಕಗಳ ವಿವರ ಬರೆದು ರಶೀತಿ ಲಗತ್ತಿಸುವುದು | ರಶೀತಿ/ ಚಲನ್ ಸಂಖ್ಯೆ<br>ತಾರೀಖು<br>ಕಚೇರಿಯ / ಬ್ಯಾಂಕಿನ ಹೆಸರು<br>ಮೊತ್ತ/ ರೂ.ಗಳು |

(Item 5 grade table)

| | 01 | 02 | 03 | 04 |
|---|---|---|---|---|
| ಪತ್ರಿಕೆಗಳು | | | | |

**ಪರೀಕ್ಷಾ ಶುಲ್ಕ ಇತ್ಯಾದಿಗಳನ್ನು ಪಾವತಿ ಮಾಡುವುದರಿಂದ ವಿನಾಯಿತಿ ಕೋರಿ ಸಲ್ಲಿಸುವ ಘೋಷಣೆ**

ವಿಶ್ವವಿದ್ಯಾನಿಲಯ ನಡೆಸುತ್ತಿರುವ ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಯನ್ನು ಈಗ ತೆಗೆದುಕೊಳ್ಳುತ್ತಿರುವುದು ಪ್ರಥಮ/ದ್ವಿತೀಯ ಬಾರಿಯಾಗಿರುತ್ತದೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ.

ಪರೀಕ್ಷೆಗೆ ಹಿಂದೆ ಹಾಜರಾಗಿರುವ ಬಗೆಗಿನ ವಿವರಗಳು (ಕಡ್ಡಾಯವಾಗಿ ನಮೂದಿಸತಕ್ಕದ್ದು)

| ವರ್ಷ | ಆಯನ (Attempt) | ರಿಜಿಸ್ಟರ್ ಸಂಖ್ಯೆ |
|---|---|---|
| | | |
| | | |
| | | |

2. ಈ ಅನಿವಾರ್ಯ ಪರೀಕ್ಷೆಯನ್ನು ಶುಲ್ಕ ರಹಿತವಾಗಿ ತೆಗೆದುಕೊಳ್ಳಬಹುದಾದ ಎರಡು ಅವಕಾಶಗಳನ್ನು ಉಪಯೋಗಿಸಿಕೊಂಡಿದ್ದೇನೆ ಎಂದು ನಾನು ಈ ಮೂಲಕ ಘೋಷಿಸುತ್ತೇನೆ. ಆದ್ದರಿಂದ ಈಗ ನಾನು ಅಪೇಕ್ಷಿತವಾದ ಪರೀಕ್ಷಾ ಶುಲ್ಕವನ್ನು ಪಾವತಿಸಿ ಅದರ ಚಲನ್ / ರಶೀತಿಯನ್ನು ಇದಕ್ಕೆ ಲಗತ್ತಿಸಿದ್ದೇನೆ.

ಪು.ತಿ.ನೋ. . .

3. ಮೇಲೆ ಒದಗಿಸಿದ ಮಾಹಿತಿಯು ಯಥಾರ್ಥವಾಗಿದೆಯೆಂದು ನಾನು ಈ ಮೂಲಕ ಘೋಷಿಸುತ್ತೇನೆ. ಮೇಲ್ಕಂಡ ಘೋಷಣೆಯಲ್ಲಾಗಲೀ ಅಥವಾ ಅಭ್ಯರ್ಥನಾ ಪತ್ರದ ಯಾವುದೇ ಕಾಲಂನಲ್ಲಾಗಲೀ ನಾನು ಒದಗಿಸಿದ ವಿವರಗಳು ಸುಳ್ಳೆಂದು ಕಂಡುಬಂದಲ್ಲಿ ಆಗ ನನ್ನ ಮೇಲೆ ಕಾನೂನು ಕ್ರಮ ಜರುಗಿಸುವುದರ ಜೊತೆಗೆ ಈ ಕೆಳಕಂಡಂತೆ ಕ್ರಮಗಳಿಗೂ ನಾನು ಬದ್ಧನಾಗಿರುತ್ತೇನೆ.

ಅ. ವಿಶ್ವವಿದ್ಯಾನಿಲಯವು ಸೇವಾ ಪರೀಕ್ಷೆಗೆ ಹಾಜರಾಗದಂತೆ ಖಾಯಂ ಆಗಿ ಡಿಬಾರ್ ಮಾಡತಕ್ಕದ್ದು ಅಥವಾ ನಿಗದಿಪಡಿಸಿದ ಒಂದು ಅವಧಿಗೆ ಡಿಬಾರ್ ಮಾಡತಕ್ಕದ್ದು (ನಿಷೇಧಿಸತಕ್ಕದ್ದು)

ಆ. ಶಿಸ್ತಿನ ಕ್ರಮಕ್ಕೆ ಒಳಪಡಿಸತಕ್ಕದ್ದು.

ಸ್ಥಳ :

ದಿನಾಂಕ :

ಅಭ್ಯರ್ಥಿಯ ಸಹಿ

<u>ಅಭ್ಯರ್ಥಿಯು ಕೆಲಸ ಮಾಡುತ್ತಿರುವ ಕಾರ್ಯಾಲಯದ ಉಪಯೋಗಕ್ಕೆ</u>

ಸಂಖ್ಯೆ:

ಸೂಕ್ತ ಕ್ರಮಕ್ಕಾಗಿ ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ರವರಿಗೆ ಕಳುಹಿಸಲಾಗಿದೆ.

ಕಚೇರಿ/ವಿಭಾಗದ ಮುಖ್ಯಸ್ಥರ ಸಹಿ ಹಾಗೂ ಮೊಹರು

# ತುಮಕೂರು ವಿಶ್ವವಿದ್ಯಾನಿಲಯ

## ವಿಶ್ವವಿದ್ಯಾನಿಲಯ ಇಲಾಖಾ ಮತ್ತು ಕನ್ನಡ ಭಾಷಾ ಪರೀಕ್ಷೆ ಪ್ರವೇಶ ಪತ್ರ

ಗ್ರೇಡ್ : ____________________ ರಿಜಿಸ್ಟರ್ ನಂ: __________

<table>
<tr><td>1</td><td>ಅಭ್ಯರ್ಥಿಯ ಹೆಸರು ಮತ್ತು ಹುದ್ದೆ (ಸ್ಫುಟವಾಗಿ)</td><td colspan="5"></td></tr>
<tr><td>2</td><td>ಅಭ್ಯರ್ಥಿಯು ಉತ್ತರಿಸಬಯಸುವ ಶಿಕ್ಷಣ ಮಾಧ್ಯಮ</td><td colspan="5"></td></tr>
<tr><td>3</td><td>ಪರೀಕ್ಷಾ ಕೇಂದ್ರ (ಕಾರ್ಯಾಲಯದವರು ಭರ್ತಿ ಮಾಡಬೇಕು)</td><td colspan="5"></td></tr>
<tr><td rowspan="3">4</td><td rowspan="3">ಅಭ್ಯರ್ಥಿಗಳು ತಾವು ಯಾವ ಪತ್ರಿಕೆಯ ಪರೀಕ್ಷೆಗಾಗಿ ಕೂರುತ್ತಾರೆಯೋ ಅಂತಹ ಪತ್ರಿಕೆಯ ಕಾಲಂನಲ್ಲಿ "ಹೌದು ಅಥವಾ ಇಲ್ಲ" ಎಂದು ನಮೂದಿಸತಕ್ಕದ್ದು</td><td colspan="5">ಗ್ರೇಡ್:</td></tr>
<tr><td></td><td>01</td><td>02</td><td>03</td><td>04</td></tr>
<tr><td>ಪತ್ರಿಕೆಗಳು</td><td></td><td></td><td></td><td></td></tr>
</table>

ಅಭ್ಯರ್ಥಿಯ ಮಾದರಿ ಸಹಿ ___________

ಕುಲಸಚಿವರು(ಪ)

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಈ ಕೆಳಗೆ ತಿಳಿಸಿರುವ ಜಾಗದಲ್ಲಿ
(ಅಭ್ಯರ್ಥಿಯು ಸರಿಯಾದ ಕಚೇರಿ ವಿಳಾಸವನ್ನು ಬರೆಯತಕ್ಕದ್ದು)

ಶ್ರೀ/ ಶ್ರೀಮತಿ.______________________

______________________________

______________________________

ಪು.ತಿ.ನೋ. . . . .

ಅಭ್ಯರ್ಥಿಗಳಿಗೆ ಸೂಚನೆಗಳು :

1. ಅಭ್ಯರ್ಥಿಗಳು ಕರ್ನಾಟಕ ರಾಜ್ಯದ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ದ ಆವೃತ್ತಿಯನ್ನು ಅಧ್ಯಯನ ಮಾಡಬೇಕು.
2. ಅಭ್ಯರ್ಥಿಗಳಿಗೆ ಪರೀಕ್ಷೆ ಆರಂಭವಾಗುವುದಕ್ಕಿಂತ ಹತ್ತು ನಿಮಿಷಗಳು ಮುಂಚಿತವಾಗಿ ಪರೀಕ್ಷಾ ಕೊಠಡಿಯೊಳಗೆ ಪ್ರವೇಶಿಸಲು ಅವಕಾಶ ನೀಡಲಾಗುವುದು. ಪರೀಕ್ಷೆ ಆರಂಭವಾಯಿತೆಂದು ಸೂಚಿಸಲು ಘಂಟೆ ಬಾರಿಸಿದ ಕೂಡಲೇ ಪರೀಕ್ಷಾ ಕೊಠಡಿಯ ಬಾಗಿಲುಗಳನ್ನೆಲ್ಲಾ ಮುಚ್ಚಲಾಗುವುದು ಮತ್ತು ಅಭ್ಯರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳನ್ನು ವಿತರಣೆ ಮಾಡಲಾಗುವುದು. ನಿಗದಿಪಡಿಸಿದ ವೇಳೆಯ ಅನಂತರ ಬರುವ ಅಭ್ಯರ್ಥಿಗಳನ್ನು ಅವರ ಪ್ರವೇಶ ಪತ್ರ ಪರಿಶೀಲಿಸಿದ ನಂತರ ಒಬ್ಬೊಬ್ಬರಂತೆ ಒಳಗೆ ಬಿಡಲಾಗುವುದು.
3. ಪರೀಕ್ಷೆ ಆರಂಭವಾಗಿ ಅರ್ಧಗಂಟೆ ಕಳೆದ ತರುವಾಯ ಅಭ್ಯರ್ಥಿಗಳಿಗೆ ಪರೀಕ್ಷಾ ಕೊಠಡಿಯ ಒಳಗೆ ಪ್ರವೇಶಿಸಲು ಅವಕಾಶ ನೀಡಲಾಗುವುದಿಲ್ಲ.
4. ಯಾವ ಅಭ್ಯರ್ಥಿಯೇ ಆಗಲಿ ಪರೀಕ್ಷಾ ಕೊಠಡಿಯಲ್ಲಿನ ಕಾವಲು ಅಧಿಕಾರಿಗಳ ಪೂರ್ವಾನುಮತಿಯಿಲ್ಲದೆ ಪರೀಕ್ಷಾ ಕೊಠಡಿಯಿಂದ ಹೊರಗೆ ಹೋಗಲು ಅನುಮತಿ ನೀಡಲಾಗುವುದಿಲ್ಲ.
5. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ತಮ್ಮ ಉತ್ತರ ಪತ್ರಿಕೆಗಳನ್ನು ತಾವೇ ಸ್ವತಃ ಬರೆಯಬೇಕು.
6. ಯಾವ ಅಭ್ಯರ್ಥಿಯೇ ಆಗಲಿ ಬೇರಾವುದೇ ಅಭ್ಯರ್ಥಿಯ ಉತ್ತರ ಪತ್ರಿಕೆಯಿಂದ ನಕಲು ಮಾಡತಕ್ಕದ್ದಲ್ಲ ಅಥವಾ ಬೇರೆ ಅಭ್ಯರ್ಥಿಗಳಿಗೆ ಯಾವುದೇ ವಿವರಣೆಯನ್ನು ನೀಡಲು ಅಥವಾ ನೀಡಲೆತ್ನಿಸಲು ಅಥವಾ ಪಡೆಯಲು ಅಥವಾ ಪಡೆಯಲೆತ್ನಿಸುವುದು ಸರಿಯಲ್ಲ.
7. ಯಾವ ಅಭ್ಯರ್ಥಿಯೇ ಆಗಲಿ ಬೇರೆ ಯಾವುದೇ ಅಭ್ಯರ್ಥಿಯೊಡನೆ ಮಾತನಾಡುತ್ತಿರುವುದು ಅಥವಾ ಯಾವುದೋ ರೀತಿಯಲ್ಲಿ ಅವರೊಡನೆ ಏನಾದರೂ ತಿಳಿಸಲು ಯತ್ನಿಸುತ್ತಿರುವುದು ಕಂಡು ಬಂದಲ್ಲಿ ಆಗ ಪರೀಕ್ಷಾ ಕೊಠಡಿಯಲ್ಲಿನ ಕಾವಲು ಅಧಿಕಾರಿಗಳು ಆ ಬಗ್ಗೆ ಅಭ್ಯರ್ಥಿಗಳಿಂದ ಹೇಳಿಕೆಯನ್ನು ಪಡೆದು ಆ ಹೇಳಿಕೆಯ ಜೊತೆಗೆ ಆ ಬಗ್ಗೆ ಸೂಕ್ತ ಕ್ರಮಕ್ಕಾಗಿ ತುಮಕೂರು ವಿಶ್ವವಿದ್ಯಾನಿಲಯದ ಕುಲಸಚಿವರಿಗೆ ವರದಿ ಮಾಡಬೇಕಾಗುವುದು.
8. ಅಭ್ಯರ್ಥಿಗಳು ನಿಗದಿಪಡಿಸಿದ ಪತ್ರಿಕೆಗೆ ಮಾತ್ರ ಪಠ್ಯಪುಸ್ತಕಗಳ ಸಂಕ್ಷಿಪ್ತವಲ್ಲದ ಮತ್ತು ಟಿಪ್ಪಣಿ ರಹಿತವಾದ ಆವೃತ್ತಿಗಳನ್ನು ಪರೀಕ್ಷಾ ಕೊಠಡಿಗೆ ತರಲು ಮತ್ತು ಉತ್ತರಿಸುವಾಗ ಅದನ್ನು ಪರಾಮರ್ಶಿಸಲು ಅನುಮತಿ ನೀಡಲಾಗುವುದು. ಆದರೆ ಅವರಿಗೆ ಪರೀಕ್ಷಾ ಕೊಠಡಿಯಲ್ಲಿ ಆ ಪುಸ್ತಕವನ್ನು ಬೇರೆ ಅಭ್ಯರ್ಥಿಗಳಿಗೆ ಕೊಡಲಿಕ್ಕೆ ಆಗಲಿ ಅಥವಾ ಅವರಿಂದ ತೆಗೆದುಕೊಳ್ಳಲಿಕ್ಕೆ ಆಗಲಿ ಅವಕಾಶವನ್ನು ನೀಡುವುದಿಲ್ಲ. ಯಾವ ಅಭ್ಯರ್ಥಿಯೇ ಆಗಲಿ ಯಾವುದೇ ನೋಟ್ಸ್ ಅಥವಾ ಕೈಪಿಡಿಯನ್ನಾಗಲೀ ಅಥವಾ ಬೇರಾವುದೇ ಪುಸ್ತಕಗಳನ್ನಾಗಲೀ ಪರೀಕ್ಷಾ ಕೊಠಡಿಯೊಳಗೆ ತರತಕ್ಕದ್ದಲ್ಲ.
9. ಅಭ್ಯರ್ಥಿಯು ತನ್ನ ಪತ್ರಿಕೆಯನ್ನು ಪೂರ್ತಿಯಾಗಿ ಮುಗಿಸಿದ ನಂತರ ತಮ್ಮ ಸ್ಥಾನದಲ್ಲಿ ಎದ್ದು ನಿಲ್ಲಬೇಕು ಮತ್ತು ಪರೀಕ್ಷಾ ಕೊಠಡಿಯ ಮೇಲ್ವಿಚಾರಕರು ಬಂದು ಅವರ ಉತ್ತರ ಪತ್ರಿಕೆಯನ್ನು ತೆಗೆದುಕೊಂಡು ಹೋಗುವವರೆಗೂ ಹಾಗೆಯೇ ನಿಂತುಕೊಂಡಿರತಕ್ಕದ್ದು. ನಿಗದಿತ ಕಾಲಾವಧಿ ಮುಗಿದ ನಂತರ ಅವರು ತಮ್ಮ ಉತ್ತರವನ್ನು ಪರಿಷ್ಕರಿಸಲು ಅಥವಾ ಬರೆಯಲು ಅವಕಾಶ ನೀಡುವುದಿಲ್ಲ.
10. ಉತ್ತರ ಪತ್ರಿಕೆಯಿಂದ ಕಾಗದದ ಹಾಳೆಗಳನ್ನು ಹರಿದು ತೆಗೆಯಕೂಡದೆಂದು ಅಥವಾ ಹಾಳೆಗಳನ್ನು ನೆಲದ ಮೇಲೆ ಎಸೆಯಕೂಡದೆಂದು ಅಭ್ಯರ್ಥಿಗಳಿಗೆ ಕಟ್ಟುನಿಟ್ಟಾಗಿ ಎಚ್ಚರಿಕೆ ನೀಡಲಾಗಿದೆ.
11. ಅಭ್ಯರ್ಥಿಗಳು ಪರೀಕ್ಷಾ ಕೊಠಡಿಗೆ ಬರುವಾಗ ತಮ್ಮ ಪ್ರವೇಶ ಪತ್ರಗಳನ್ನು ತರತಕ್ಕದ್ದು ಮತ್ತು ಮೇಲ್ವಿಚಾರಣಾಧಿಕಾರಿಗಳು ಕೇಳಿದಾಗ ಅದನ್ನು ಪರಿಶೀಲನೆಗಾಗಿ ಅವರಿಗೆ ಸಾದರಪಡಿಸತಕ್ಕದ್ದು.
12. ಅಭ್ಯರ್ಥಿಯು ತಮ್ಮ ಉತ್ತರ ಪುಸ್ತಕಗಳಲ್ಲಿ ತಮ್ಮ ರಿಜಿಸ್ಟರ್ ಸಂಖ್ಯೆಯನ್ನು ಮಾತ್ರ ಬರೆಯತಕ್ಕದ್ದು, ಹೆಸರುಗಳನ್ನು ಬರೆಯತಕ್ಕದ್ದಲ್ಲ.
13. ಅಭ್ಯರ್ಥಿಯು ಯಾವುದೇ ಸೇವಾ ಪರೀಕ್ಷೆಯಲ್ಲಿ ತನ್ನ ಹೆಸರನ್ನು ಬಹಿರಂಗಪಡಿಸಿಯೋ ಅಥವಾ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಅದರಿಂದ ಗುಪ್ತಪ್ರಭಾವ ಬೀರಿಯೋ ಅಥವಾ ಪರೀಕ್ಷೆ ಕೊಠಡಿಯಲ್ಲಿ ಅನ್ಯಾಯದ ಅಥವಾ ಅನುಚಿತವಾದ ವಿಧಾನಗಳನ್ನು ಬಳಸಿಯೋ ಅಥವಾ ಬಳಸಲೆನಿಸಿಯೋ ಅಪರಾಧವೆಸಗಿದ್ದಾರೆ ಎಂದು ವಿಶ್ವವಿದ್ಯಾನಿಲಯಕ್ಕೆ ಕಂಡು ಬಂದಲ್ಲಿ ಆಗ ವಿಶ್ವವಿದ್ಯಾನಿಲಯ (ಅ) ಅಂಥ ಅಭ್ಯರ್ಥಿಯನ್ನು ಮುಂದೆ ವಿಶ್ವವಿದ್ಯಾನಿಲಯದ ಯಾವುದೇ ಪರೀಕ್ಷೆ ತೆಗೆದುಕೊಳ್ಳದಂತೆ (ಆ) ಶಿಸ್ತಿನ ಕ್ರಮಕ್ಕೆ ಒಳಪಡಿಸಬಹುದು.